ವಿಷಯ: ಪವರ್‌ಲೂಮ್ ಬಟ್ಟೆ ಉತ್ಪಾದಕರ ಸಮಸ್ಯೆಗಳು.

2549 (3615)

ಶ್ರೀ ಕುಂಬ್ಳೆ ಸುಂದರರಾವ್, (ಸುರತ್ಕಲ್): ಮಾನ್ಯ ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪವರ್‌ಲೂಮ್ ನಿರ್ದೇಶನಾಲಯದ ಕಾರ್ಯವ್ಯಾಪ್ತಿಗಳೇನು? ನಿರ್ದೇಶನಾಲಯವು ಪವರ್‌ಲೂಮ್ ನೇಕಾರರು ಮತ್ತು ಬಟ್ಟೆ ಉತ್ಪಾದಕರುಗಳು ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ ಗಮನ ಹರಿಸಿದೆಯೇ? ಹರಿಸಿದಲ್ಲಿ ಅವರುಗಳು ಎದುರಿಸುತ್ತಿರುವ ತೀವ್ರ ತರಹದ ಸಮಸ್ಯೆಗಳಾವುವು? ಅವುಗಳನ್ನು ಬಗೆಹರಿಸಲು ನಿರ್ದೇಶನಾಲಯವು ಕೈಗೊಂಡ ಕ್ರಮಗಳೇನು?

ಆ) ಮಾರುಕಟ್ಟೆಯಲ್ಲಿ ಪವರ್‌ಲೂಮ್ ಉತ್ಪಾದಿತ ಬಟ್ಟೆಗಳಿಗೆ ಸರಿಯಾದ ಬೆಲೆಯು ಸಿಕ್ಕದೆಯಿರುವುದರಿಂದ ಮಧ್ಯವರ್ತಿ ವ್ಯಾಪಾರಗಳ ಹಿಡಿತದಲ್ಲಿ ಸಿಕ್ಕಿ ನಷ್ಟವನ್ನು ಅನುಭವಿಸುತ್ತಿರುವ ಬಗ್ಗೆ ನಿರ್ದೇಶನಾಲಯವು ಚಿಂತನೆ ನಡೆಸಿದೆಯೇ?

.ಇ) ಇಂಥ ಮಧ್ಯವರ್ತಿಗಳ ಹಿಡಿತದಿಂದ ನೇಕಾರರನ್ನು ಪಾರು ಮಾಡಿ ಅವರು ನೇಯ್ದಬಟ್ಟೆಗಳನ್ನು ಕೊಂಡು ಕೊಳ್ಳುವ ಬಗ್ಗೆ ಈ ಹಿಂದೆ ಏರ್ಪಾಡು ಮಾಡಿದ ಫ್ಯಾಬ್ರಿಕ್ ಬ್ಯಾಂಕ್ ವ್ಯವಸ್ಥೆಯು ಜಾರಿಯಲ್ಲಿದೆಯೇ? ಇದ್ದಲ್ಲಿ ಅದಕ್ಕೆ ಬೇಕಾಗುವಷ್ಟು ಹಣ ಮತ್ತಿತರ ಸವಲತ್ತುಗಳನ್ನು ಒದಗಿಸಿಕೊಡಲಾಗಿದೆಯೇ?

ಈ) ಫ್ಯಾಬ್ರಿಕ್ಸ್ ಬ್ಯಾಂಕ್ ವ್ಯವಸ್ಥೆಯನ್ನು ಸಾಕಷ್ಟು ಬಲಪಡಿಸಿ ನೇಕಾರರು ನೇಯ್ದ ಬಟ್ಟೆಗಳನ್ನು ಕೊಂಡುಕೊಂಡು ಅವರಿಗೆ ನಿಗದಿತ ಮೊತ್ತದ ಹಣವನ್ನು ನೀಡುವ ವ್ಯವಸ್ಥೆಯನ್ನು ಜಾರಿಗೆ ತರಲಾಗುವುದೇ?

ಶ್ರೀ ಎಂ.ಎಸ್.ಪಾಟೀಲ್ (ಜವಳಿ ಸಚಿವರು):

ಅ) ಪವರ್‌ಲೂಮ್‌ಗೆಂದೇ ಪ್ರತ್ಯೇಕ ನಿರ್ದೇಶನಾಲಯ ಅಸ್ಥಿತ್ವದಲ್ಲಿ ಇರುವುದಿಲ್ಲ. ಕೈಮಗ್ಗ ಮತ್ತು ಆಡಳಿತ ನಿರ್ದೇಶನಾಲಯ ಪವರ್‌ಲೂಂ ನೇಕಾರರು ಮತ್ತು ಬಟ್ಟೆ ಉತ್ಪಾದಕರು ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ ಗಮನ ಹರಿಸಿದೆ.

ಅವರು ಎದುರಿಸುತ್ತಿರುವ ಸಮಸ್ಯೆಗಳೆಂದರೆ:

1) ಹಣಕಾಸು ಸಂಸ್ಥೆಗಳಿಂದ ಬೇಕಾದ ಅವಧಿಸಾಲ ಹಾಗೂ ದುಡಿಮೆ ಬಂಡವಾಳ ದೊರೆಯದೆ ಇರುವುದು.

2) ಆಧುನೀಕರಣಕ್ಕೆ ಬೇಕಾದ ಹಣಕಾಸಿನ ಕೊರತೆ.

3) ಕಚ್ಚಾಮಾಲಿನ ಏರುಪೇರು ಬೆಲೆ.

4) ವಿದ್ಯುಚ್ಛಕ್ತಿ ನಿರ್ಬಂಧ ಹಾಗೂ ಅನಿರ್ಧಿಷ್ಟಕಾಲದಲ್ಲಿ ವಿದ್ಯುತ್ ಲೋಡ್ ಶೆಡ್ಡಿಂಗ್.

5) ಮಧ್ಯವರ್ತಿಗಳು ಹಾಗೂ ಬಂಡವಾಳಶಾಹಿಗಳಿಂದ ವ್ಯಾಪಾರದ ಹಿಡಿತ ಹಾಗೂ ಇದರಿಂದಾಗಿ ನೇಕಾರರ ಶೋಷಣೆ.

6) ವ್ಯವಸ್ಥಿತವಾದ ಮಾರುಕಟ್ಟೆ ಇಲ್ಲದಿರುವುದು.

ಇವುಗಳನ್ನು ಬಗೆಹರಿಸಲು ಕೈಗೊಂಡ ಕ್ರಮಗಳೆಂದರೆ:

1) ಮಗ್ಗಗಳನ್ನು ಹೊಂದಲು ಹಾಗೂ ಆಧುನೀಕರಣ ಗೊಳಿಸಲು ಅಲ್ಪಾವಧಿ ಸಾಲಮಿತಿ ಹಾಗೂ ಅವಧಿ ಸಾಲಕ್ಕಾಗಿ ಡಿ.ಸಿ.ಸಿ.ಮತ್ತು ಅಪೆಕ್ಸ್ ಬ್ಯಾಂಕ್‌ಗಳನ್ನು ಒಪ್ಪಿಸಲು ಪ್ರಯತ್ನ ನಡೆದಿದೆ.

2) ಹಂತ ಹಂತವಾಗಿ ಆಧುನೀಕರಣ ಯೋಜನೆಯನ್ನು ಕೈಗೆತ್ತಿಕೊಳ್ಳಲು ಕರ್ನಾಟಕ ವಿದ್ಯುತ್ ಮಗ್ಗ ಅಭಿವೃದ್ಧಿ ನಿಗಮಕ್ಕೆ ಸೂಚಿಸಲಾಗುವುದು.

3) ಕಚ್ಚಾಮಾಲಿನ ಬೆಲೆ ಏರುಪೇರನ್ನು ಸರಿದೂಗಿಸಲು ನೂಲಿನ ಬ್ಯಾಂಕ್‌ಗಳನ್ನು ಎನ್‌ಟಿಸಿ, ಕೆಎಸ್‌ಪಿಡಿಸಿ ಹಾಗೂ ಎಸ್‌ಎಂಎನ್ ಮೂಲಕ ಸ್ಥಾಪಿಸಲು ಕ್ರಮ ಕೈಗೊಳ್ಳಲಾಗುವುದು.

4) ವಿದ್ಯುತ್‌ಮಗ್ಗ ಅಭಿವೃದ್ಧಿ ನಿಗಮ ಹಾಗೂ ಡಿಎಸ್‌ಎಂಎಸ್ ವಿದ್ಯುತ್ ಮಗ್ಗ ಸಹಕಾರ ಸಂಘಗಳ ಮೂಲಕ ಯಾರ್ನ್ ಮತ್ತು ಫ್ಯಾಬ್ರಿಕ್ ಬ್ಯಾಂಕ್ ಸ್ಥಾಪನೆ ಮಾಡಲು ನಿರ್ದೇಶಿಸಲಾಗುವುದು.

ಆ) ಹೌದು.

ಇ) ಬೆಂಗಳೂರು ನಗರದಲ್ಲಿರುವ ವಿದ್ಯುತ್‌ಮಗ್ಗ ನೇಕಾರರ ಅನುಕೂಲಕ್ಕಾಗಿ ಫ್ಯಾಬ್ರಿಕ್ ಬ್ಯಾಂಕ್ ವ್ಯವಸ್ಥೆಯನ್ನು 1998-99ನೇ ಸಾಲಿನಲ್ಲಿ ವಿದ್ಯುತ್‌ಮಗ್ಗ ಅಭಿವೃದ್ಧಿ ನಿಗಮದಲ್ಲಿ ಜಾರಿಯಲ್ಲಿತ್ತು. ಆದರೆ, ಇದರ ಸೌಲಭ್ಯವನ್ನು ಪಡೆಯಲು ಹೆಚ್ಚಿನ ಸಂಖ್ಯೆಯಲ್ಲಿ ಫಲಾನುಭವಿಗಳು ಮುಂದೆ ಬಾರದ ಕಾರಣ ಸಧ್ಯದಲ್ಲಿ ಈ ವ್ಯವಸ್ಥೆಯು ಕಾರ್ಯ ಸ್ಥಗಿತಗೊಂಡಿದೆ. ಆದಾಗ್ಯೂ ಕೂಡ ವಿದ್ಯುತ್ ಮಗ್ಗ ಅಭಿವೃದ್ಧಿ ನಿಗಮ ಹಾಗೂಜಿಲ್ಲಾ ಮಟ್ಟದಲ್ಲಿ ಡಿಎಸ್‌ಎಂಎಸ್ ಮೂಲಕ ಫ್ಯಾಬ್ರಿಕ್ ಬ್ಯಾಂಕ್ ವ್ಯವಸ್ಥೆಯನ್ನು ಪುನಃ ಜಾರಿಗೆ ತರುವಂತೆ ಸೂಕ್ತ ಸೂಚನೆ ನೀಡಲಾಗುವುದು. ನೇಕಾರ ಸಹಕಾರ ಸಂಘಗಳು ಈ ಸೌಲಭ್ಯವನ್ನು ಉಪಯೋಗಿಸಲು ಮುಂದೆ ಬಂದಲ್ಲಿ ಇನ್ನೂ ಹೆಚ್ಚಿನ

ಬ್ಯಾಂಕ್‌ಗಳನ್ನು ತೆರೆಯಲು ಕೆಎಸ್‌ಪಿಡಿಸಿ ಹಾಗೂ ಡಿಎಸ್‌ಎಂಎಸ್‌ಗಳಿಗೆ ನಿರ್ದೇಶನ ನೀಡಲಾಗುವುದು.

ಈ) ಮೇಲಿನಂತೆ.

ವಿಷಯ: ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದಲ್ಲಿರುವ ಕಾರ್ಯನಿರತ ನೇಕಾರರು

2550 (3788)

ಶ್ರೀ ಕುಂಬ್ಳೆ ಸುಂದರರಾವ್ (ಸುರತ್ಕಲ್): ಮಾನ್ಯ ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದಲ್ಲಿ ಪ್ರಸ್ತುತ ಕಾರ್ಯ ನಿರತರಾಗಿರುವ ನೇಕಾರರ ಸಂಖ್ಯೆ ಎಷ್ಟು?

ಆ) ನಿಗಮದಿಂದ ಉತ್ಪಾದಿಸಲಾಗುವ ಬಟ್ಟೆಯ ಪ್ರಮಾಣ, ನಿಗಮದಲ್ಲಿ ಸೇವೆ ಸಲ್ಲಿಸುತ್ತಿರುವ ನೇಕಾರರ ಪ್ರಮಾಣ ಮುಂತಾಗಿ ಗಮನಿಸಿದಾಗ ನಿಗಮದ ಸಿಬ್ಬಂದಿ ವೆಚ್ಚಕ್ಕೆ ಇದು ಸರಿ ಹೊಂದುತ್ತಿದೆಯೇ?

ಇ) ಬಟ್ಟೆ ಉತ್ಪಾದನೆಯನ್ನು ಸಾಕಷ್ಟು ಪ್ರಮಾಣದಲ್ಲಿ ಮಾಡದೆ, ಕೇವಲ ಅಧಿಕಾರಿಗಳ ಮತ್ತು ನೌಕರರ ಸಂಬಳ ಸಾರಿಗೆಗಾಗಿ ಸರ್ಕಾರವು ಇಷ್ಟೊಂದು ಮೊತ್ತದ ಹಣವನ್ನು ನೇಕಾರರ ಹೆಸರಿನಲ್ಲಿ ಖರ್ಚು ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಹಾಗಿದ್ದಲ್ಲಿ ಆ ಕುರಿತು ಸರ್ಕಾರದ ಚಿಂತನೆ ಏನು?

ಶ್ರೀ ಎಂ.ಎಸ್.ಪಾಟೀಲ್ (ಜವಳಿ ಸಚಿವರು)

ಅ) 1997 ಜುಲೈ ಅಂತ್ಯದ ವೇಳೆಗೆ 16,801 ಕೈಮಗ್ಗಗಳು ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದಡಿಯಲ್ಲಿ ಕಾರ್ಯನಿರತವಾಗಿದ್ದವು. ಲೆಕ್ಕ ಚುಕ್ತ ಮಾಡಲಾದ ನೇಕಾರರ ಸಂಖ್ಯೆ: 16,428 ಮತ್ತು ನಿಷ್ಕ್ರಿಯ ಮಗ್ಗಗಳ ಸಂಖ್ಯೆ: 1428.

ಆ,ಇ) 1995 ಮತ್ತು 1996ರಲ್ಲಿ ಹಲವಾರು ಕಾರಣಗಳಿಂದ ಕಾರ್ಯನಿರತ ಮಗ್ಗಗಳು ಕಡಿಮೆಯಾಗಿದ್ದು, ನೇಕಾರರ ಸಂಖ್ಯೆಯು ಹೆಚ್ಚಿಸಿ, ಹಾಗೂ ಉತ್ಪಾದನೆಯನ್ನು ಹೆಚ್ಚಳ ಮಾಡಿ, ಸಿಬ್ಬಂದಿ ವೆಚ್ಚವನ್ನು ನೇಕಾರರ ಸಂಖ್ಯೆ ಹಾಗೂ ಉತ್ಪಾದನೆಗೆ ಸರಿದೂಗಿಸಲು ಹಲವಾರು ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ. ಈ ದಿಸೆಯಲ್ಲಿ ಕೈಗೊಂಡ ಮುಖ್ಯ ಕ್ರಮಗಳೇನೆಂದರೆ ನೇಕಾರರಿಗೆ ಅಡಚಣೆಯಿಲ್ಲದೆ ನೂಲು ಸರಬರಾಜು ಮಾಡುವುದು ಮತ್ತು ಸಕಾಲದಲ್ಲಿ ನೇಯ್ಗೆ ಮಾಡಲು ಪಾವತಿಸುವುದು. ದಿನಾಂಕ 1.6.1997ರಿಂದ ಜಾರಿಗೆ ಬಂದಂತೆ ಮಜೂರಿ ದರಗಳನ್ನು ಶೇಕಡ 10ರಿಂದ